# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬೃ.ಬೆ.ಮ.ಪಾ/ಸಕಾಅ/ಬೊಉ/ಪಿಆರ್/ /2021-22

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಬೊಮ್ಮನಹಳ್ಳಿ ಉಪವಿಭಾಗ
ಕೋಡಿಚಿಕ್ಕನಹಳ್ಳಿ ಮುಖ್ಯರಸ್ತೆ, ಬಿಳೇಕಹಳ್ಳಿ
ಬೆಂಗಳೂರು-560076, ದಿನಾಂಕ: 11/02/2022

## ದಿನಾಂಕ: 11.02.2022 ರಂದು ನಡೆದ ಸಭಾ ನಡವಳಿಗಳು

**ವಾರ್ಡ್ ಸಮಿತಿಯ ಹಾಜರಿದ್ದವರು**

1. ಶ್ರೀ ಎಸ್.ಇ ಶ್ರೀನಿವಾಸ್ – ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಕೆ.ಪಿ ಉಮೇಶ್ – ಕಾರ್ಯದರ್ಶಿಗಳು ಹಾಗೂ ಸಹಯಕ ಅಭಿಯಂತರರು ವಾರ್ಡ್-175
3. ಶ್ರೀ ಸಂತೋಷ್ ಪ್ರಸಾದ್ ಎಂ – ಸಹಾಯಕ ಅಭಿಯಂತರರು (BWSSB).
4. ಶ್ರೀ ಮಹೇಶ್ ಕುಮಾರ್ ಎಸ್ – ಕಿರಿಯ ಅಭಿಯಂತರರು (BESCOM).
5. ಶ್ರೀ ಟಿ.ಆರ್ ನಾರಯಣ – ಕಂದಾಯ ಪರಿವೀಕ್ಷಕರು.
6. ಶ್ರೀ/ಶ್ರೀಮತಿ ಕಲ್ಪನ ವಿ – ಹಿರಿಯ ಆರೋಗ್ಯ ಪರಿವೀಕ್ಷಕರು.
7. ಶ್ರೀ ಅಮಿತ್ ಕುಮಾರ್ – ಸಹಾಯಕ ಅಭಿಯಂತರರು (BESCOM).
8. ಶ್ರೀ ಸುರೇಶ್.ಟಿ – ಕಿರಿಯ ಅಭಿಯಂತರರು (BESCOM).
9. ಶ್ರೀ ದಯಾನಂದ್ – ಮಾರ್ಷಲ್.
10. ಶ್ರೀ ಹೆಚ್ ನರಸಪ್ಪ – ತೋಟಗಾರಿಕೆ ಇಲಾಖೆ.
11. ಶ್ರೀ ಮೋಹನ್ ಎಸ್ – ಸಹಾಯಕ ಕಂದಾಯ ಅಧಿಕಾರಿಗಳು.
12. ಶ್ರೀ ರಮೇಶ್ ಡಿ – ಕಿರಿಯ ಅಭಿಯಂತರರು (ವಿದ್ಯುತ್ ವಿಭಾಗ).
13. ಶ್ರೀ ಟಿ. ನಟರಾಜ್ – ಸಹಾಯಕ ಕಂದಾಯ ಅಧಿಕಾರಿಗಳು.

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಎಸ್.ಇ ಶ್ರೀನಿವಾಸ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಶ್ರೀ ಕೆ.ಪಿ ಉಮೇಶ್ ಸಹಾಯಕ ಅಭಿಯಂತರರು ಹಾಗೂ ಸಮಿತಿ ಕಾರ್ಯದರ್ಶಿಗಳು ಸಭೆಗೆ ಆಗಮಿಸಿದ ಎಲ್ಲಾರಿಗೂ ಸ್ವಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಅಧ್ಯಕ್ಷರವರನ್ನು ವಾರ್ಡ್ ಸಭೆಯ ಕುಂದುಕೊರತೆಗಳ ಬಗ್ಗೆ ಸವಿಸ್ಥಾರವಾಗಿ ಪ್ರಸ್ಥಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ 175ರ ವ್ಯಾಪ್ತಿಯಲ್ಲಿ ಬರುವ ಘನತ್ಯಾಜ್ಯ, ರಸ್ತೆಗಳ ಗುಂಡಿ ಮುಂಚ್ಚುವ, ಬೀಧಿ ದೀಪ ನಿರ್ವಹಣೆ ಹಾಗೂ ಇತರೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಸದಸ್ಯರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಹಿಂದೆ ನಡೆದ ಸಭೆಯ ಸಭಾ ನಡವಳಿಗಳನ್ನು ಚರ್ಚಿಸಿ ಬಾಕಿ ಇರುವ ಕುಂದು ಕೊರತೆಗಳನ್ನು ಪೂರೈಯಿಸಲು ಸಭೆಯಲ್ಲಿ ತಿಳಿಸಿರುತ್ತಾರೆ, ಆದರೆ ಹಿಂದಿನ ಸಭೆಯ ಕಾರ್ಯದರ್ಶಿಗಳು ವರ್ಗಾವಣೆಯಾಗಿರುವ ಪ್ರಯುಕ್ತ ಹಿಂದಿನ ನಡವಳಿಗಳನ್ನು ಚರ್ಚಿಸಲು ಆಗಲಿಲ್ಲ.

1. ಪ್ರಪ್ರಥಮವಾಗಿ ವಾರ್ಡ್ 175 ಬೊಮ್ಮನಹಳ್ಳಿಯಲ್ಲಿ ಹಲವಾರು ರಸ್ತೆಗಳ ಹಲವಾರು ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಮುಕ್ತಾಯಗೊಳಿಸಿದಕ್ಕೆ ಸಭೆಯಲ್ಲಿ ಸರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಯಿತು ಮತ್ತು ಈ ವಾರ್ಡಿಗೆ ಹಲವು ಅನುದಾನ ದೊರಕಿದ್ದು 5ನೇ ಮುಖ್ಯರಸ್ತೆ, ಕೃಷ್ಣ ಲೇಔಟ್‌ನಲ್ಲಿ ಸನ್ಮಾನ ಮಾಡಲಾಯಿತೆಂದು ಸಭೆಯಲ್ಲಿ ತಿಳಿಸಿದರು.

2. ಸಭೆಯಲ್ಲಿ ಹಾಜರಿದ್ದ ಶ್ರೀ ಅನಂತರಾಮಯ್ಯ ಮೊ ಸಂಖ್ಯೆ: +91 9853000581 ಇವರು ರಾಯಲ್ ಎನ್‌ಕ್ಲೇವ್‌ನ ಚರಂಡಿಗಳ ಹಲವು ಕಡೆ ಸರಿಯಾಗಿ ಕಾಮಗಾರಿ ನಿರ್ವಹಿಸಿರುವುದಿಲ್ಲ ಎಂಬುದರ ಬಗ್ಗೆ ದೂರಿದ್ದು ಅದಕ್ಕೆ ಸಹಾಯಕ ಅಭಿಯಂತರರಾದ ಶ್ರೀ ಉಮೇಶ್ ಕೆ.ಪಿ ಇವರನ್ನು ಕಾಮಗಾರಿ ಪರಿವೀಕ್ಷಣೆ ಮಾಡಲು ಮಾನ್ಯ ಮಾಜಿ ಉಪ-ಮಹಾಪೌರರು ಹಾಗೂ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿದರು.

Scanned with CamScanner

3. ಸಭೆಯಲ್ಲಿ ಉಪಸ್ಥಿತರಿದ್ದ ವಿ.ಎಂ ಭಟ್ ಮೊ.ಸಂ: 9448993118 ಇವರುಗುಂಡಿ ಮುಚ್ಚುವ ಬಗ್ಗೆ ಸಭೆಯಲ್ಲಿ ಗಮನ ಸೆಳೆದರು.

4. ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರೊಬ್ಬರು ವಿರಾಟನಗರದ 5ನೇ ಅಡ್ಡರಸ್ತೆಯಲ್ಲಿ ಚರಂಡಿಗಳಿಗೆ ಚಪ್ಪಡಿಹಾಕಿರುವುದಿಲ್ಲ ಆದನ್ನು ತ್ವರಿತವಾಗಿ ಮುಚ್ಚಲು ಸಭೆಯಲ್ಲಿ ಸೂಚಿಸಿದರು.

5. 17ನೇ "ಎ"ಮುಖ್ಯರಸ್ತೆಯಲ್ಲಿ ಕಸಗಳ ವಿಲೇವಾರಿ ಹಾಗೂ ಡೆಬ್ರೀಸ್ ತೆಗೆಯಲು ಸಭೆಯ ಮುಂದೆ ಸೂಚಿಸಿದರು.

6. ಸಭೆಯಲ್ಲಿ ಹಾಜರಿದ್ದ ಶ್ರೀಮತಿ ದೀಪಾರವರು ರಸ್ತೆಯಲ್ಲಿ ಓಡಾಡುವ ಹಳೆ ವಾಹನಗಳಿಂದ ತುಂಬಾ ಹೊಗೆ ಬರುತ್ತಿದ್ದು ಇದರಿಂದ ಸಾರ್ವಜನಿಕರಿಗೆ ಆರೋಗ್ಯ ಹಾಳಾಗುತ್ತೆ. ಹಳೆ ವಾಹನಗಳನ್ನು ರಸ್ತೆಯಲ್ಲಿ ಓಡಾಡದಂತೆ ತಡೆಯಬೇಕೆಂದು ಸಭೆಯಲ್ಲಿ ಸೂಚಿಸಿದರು ಅದಕ್ಕೆ ಪ್ರತಿಯಾಗಿ ಮಾನ್ಯ ಮಾಜಿ ಉಪಮಹಾಪೌರರು ಮಾತನಾಡುತ್ತಾ ಈಗಾಗಲೇ ಹಳೆಯದಾದ 15 ವರ್ಷಗಳ ನಂತರ ಇರುವ ಹಳೆಯ ವಾಹನಗಳನ್ನು ತೆಗೆದು ಹಾಕಿ ಹೊಸದಾಗಿ ರಸ್ತೆಗೆ ಬಂದಿರುವ ವಿದ್ಯುತ್ ಚಾಲಿತ ವಾಹನಗಳನ್ನು ಬಳಸಲಾಗುತ್ತಿದೆ ಇನ್ನು 2025ರ ಹೊತ್ತಿಗೆ ಎಲ್ಲಾ ಪೆಟ್ರೋಲ್ ಡೀಸಲ್ ವಾಹನಗಳನ್ನು ಸ್ಥಗಿತಗೊಳಿಸಲಾಗುವುದು ಎಂದು ಸಭೆಯಲ್ಲಿ ಸಮಜಾಯಿಷಿ ನೀಡಿದರು ಮುಂದುವರೆಯುತ್ತಾ ಶ್ರೀಮತಿ ದೀಪಾರವರು ಮುಂದುವರೆಸುತ್ತಾ ಮಂಜುನಾಥ ಲೇಔಟ್‌ನಲ್ಲಿ ಚರಂಡಿ ಸರಿಯಾಗಿಲ್ಲ ಸರಿಪಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

7. ಸಭೆಯ ಸದಸ್ಯರಾದ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀಮತಿ / ಕುಮಾರಿ ಕಲ್ಪನ ರವರು ಮಾತನಾಡುತ್ತಾ ಈಗಾಗಲೇ ಆಸ್ಪತ್ರೆಗಳಲ್ಲಿ ವ್ಯಾಕ್ಸಿನೇಷನ್ ಕೊಡುತ್ತಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು ಸಾರ್ವಜನಿಕರಿಗೆ ತಿಳುವಳಿಕೆ ಹೇಳುವುದು ಭಯ ಹೋಗಲಾಡಿಸಲು ಹಾಗೂ ವ್ಯಾಕ್ಸಿನೇಷನ್ ಯಾರು ಸರಿಯಾಗಿ ಹಾಕಿಸಿಕೊಳ್ಳುತ್ತಿಲ್ಲ ಎಂಬುದರ ಬಗ್ಗೆ ಸಭೆಯಲ್ಲಿ ವಿವರಿಸಿದರು ಇದಕ್ಕೆ ಪ್ರತಿಯಾಗಿ ಮಾನ್ಯ ಮಾಜಿ ಉಪಮಹಾಪೌರರು ಮಾತನಾಡುತ್ತಾ ಸಾರ್ವಜನಿಕರಿಗೆ ತಿಳುವಳಿಕೆ ಹೇಳುವುದರ ಮುಖಾಂತರ ಅರಿವು ಮೂಡಿಸಲು ಸಭೆಯಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

8. ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಬೋರ್‌ವೆಲ್‌ಗಳ ರಿಪೇರಿ ಬಗ್ಗೆ ಚರ್ಚಿಸಿದರು.

9. ಭಾನು ನರ್ಸಿಂಗ್ ಹೋಂ ಪಕ್ಕ 4ನೇ ಅಡ್ಡರಸ್ತೆಯಲ್ಲಿ ಚರಂಡಿಗಳಲ್ಲಿ ಹೂಳೆತ್ತಿರುವುದಿಲ್ಲ, ಸ್ಮಶಾನ ಗೋಡೆ, ಪ್ಲಾಸ್ಟಿಕ್ ಕವರ್ಸ್ ತೆಗೆದು ಹಾಕಲು ಸಭೆಯಲ್ಲಿ ಚರ್ಚಿಸಿದರು.

10. ಸಭೆಯಲ್ಲಿ ಈ ವರ್ಷದ ಕಂದಾಯ ವಸೂಲಾತಿ 11 ಕೋಟಿ ಗುರಿ ಇಟ್ಟುಕೊಂಡಿದ್ದು ಈಗಾಗಲೇ 7.50ನ ಕೋಟಿ ಕಂದಾಯ ವಸೂಲಾಗಿದೆ ಎಂದು ಸಹ ಕಂದಾಯ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

11. ವಾರ್ಡ್ – 175ರಲ್ಲಿ ಪಾರ್ಕ್‌ಗಳ ಬಗ್ಗೆ ಮಾತನಾಡುತ್ತಾ ಪಾರ್ಕ್‌ಗಳಲ್ಲಿ ಅನಾವಶ್ಯಕ ಗಿಡಗಳು ಬೆಳೆದಿರುತ್ತವೆ ಇವನ್ನು ತೆಗೆದು ಹಾಕಲು ಸಭೆಯಲ್ಲಿ ಉಪಸ್ಥಿತರಿದ್ದ ತೋಟಗಾರಿಕೆ ಇಲಾಖೆಯವರಾದ ಶ್ರೀ ನರಸಪ್ಪರವರಿಗೆ ಸೂಚಿಸಿ ಇದರ ಜೊತೆ ಶ್ರೀ ಬಸವರಾಜು ಹಾಗು ಶ್ರೀ ಅಶೋಕ್ ಇವರ ಜೊತೆಗೂಡಿ ಪಾರ್ಕ್‌ಗಳನ್ನು ವೀಕ್ಷಣೆ ಮಾಡುವುದಕ್ಕೆ ಮಾನ್ಯ ಮಾಜಿ ಉಪಮಹಾಪೌರರು ಮಾತನಾಡುತ್ತಾ ಸಭೆಯಲ್ಲಿ ಸೂಚಿಸಿದರು ಹಾಗೂ ಸಭೆಯಲ್ಲಿ ದೂರು ಮುಂದುವರೆಸುತ್ತಾ ಬೀದಿ ದೀಪಗಳ ಹೆಚ್ಚು ಗಮನ ಹರಿಸಲು ಶ್ರೀ ರಮೇಶ್ ಕಿರಿಯ ಅಭಿಯಂತರರು ವಿದ್ಯುತ್ ವಿಭಾಗರವರಿಗೆ ಸೂಚಿಸಿದರು.

ಮುಂದುವರೆದಂತೆ, ಕೊನೆಯಲ್ಲಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳ ಅನುಮತಿ ಮೇರೆಗೆ ಸದಸ್ಯ ಕಾರ್ಯದರ್ಶಿಗಳಾದ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಕೆ.ಪಿ ಉಮೇಶ್ ರವರು ಎಲ್ಲಾರಿಗೂ ವಂದಿಸಿ, ಸಭೆ ಮುಕ್ತಾಯಗೊಳಿಸಿದರು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಆದೇಶದ ಮೇರೆಗೆ.

| | |
|---|---|
| ಸಹಿ/– | ಸಹಿ/– |
| ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| ವಾರ್ಡ್ ನಂ. 175, ಬೊಮ್ಮನಹಳ್ಳಿ | ವಾರ್ಡ್ ನಂ. 175, ಬೊಮ್ಮನಹಳ್ಳಿ |

Scanned with CamScanner

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ಬಿಬಿಎಂಪಿ ರವರಿಗೆ ಸಲ್ಲಿಸಲಾಗಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ರವರಿಗೆ ಸಲ್ಲಿಸಲಾಗಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ರವರಿಗೆ ಸಲ್ಲಿಸಲಾಗಿದೆ.
4. ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ, ರವರಿಗೆ ಸಲ್ಲಿಸಲಾಗಿದೆ.
5. ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ, ರವರಿಗೆ ಸಲ್ಲಿಸಲಾಗಿದೆ.
6. ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್-175 ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.
7. ಅಧೀಕ್ಷಕರು ತೋಟಗಾರಿಕೆ ಇಲಾಖೆ, ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.
8. ಠಾಣಾಧಿಕಾರಿಗಳು ಬೊಮ್ಮನಹಳ್ಳಿ ಪೋಲಿಸ್ ಠಾಣೆ ರವರ ರವರಿಗೆ ಸಲ್ಲಿಸಲಾಗಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯಾ ನಿರ್ವಹಣೆ ರವರಿಗೆ ಸಲ್ಲಿಸಲಾಗಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಸಲ್ಲಿಸಲಾಗಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ, ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಒಳಚರಂಡಿ ಮತ್ತು ನೀರು ಸರಬರಾಜು ರವರಿಗೆ ಸಲ್ಲಿಸಲಾಗಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರಿಗೆ ಸಲ್ಲಿಸಲಾಗಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ಉಪ-ವಿಭಾಗ ರವರಿಗೆ ಸಲ್ಲಿಸಲಾಗಿದೆ.
15. ವಲಯ ಅರಣ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ ಸಲ್ಲಿಸಲಾಗಿದೆ.
16. ಸಹಾಯಕ ಕಂದಾಯ ಅಧಿಕಾರಿಗಳು ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.
17. ಆರೋಗ್ಯ ಪರಿವೀಕ್ಷಕರು ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.
18. ಕಛೇರಿ ಪ್ರತಿ.

ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 175, ಬೊಮ್ಮನಹಳ್ಳಿ

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ. 175, ಬೊಮ್ಮನಹಳ್ಳಿ

Scanned with CamScanner